703 (977) ಶ್ರೀ ಪಾಟೀಲ್ ಎಂ ವೈ (ಅಫಜಲಪುರ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲಪುರ ಮತಕ್ಷೇತ್ರದಲ್ಲಿರುವ ದೇವಲಗಾಣಗಾಪುರ ದತ್ತಾತ್ರೇಯ ದೇವಸ್ಥಾನವು ದಕ್ಷಿಣ ಭಾರತದಲ್ಲಿಯೇ ಸುಪ್ರಸಿದ್ಧ ಯಾತ್ರಾಸ್ಥಳವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಆ) ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಸರ್ಕಾರ ಏನಾದರೂ ಯೋಜನೆ ರೂಪಿಸಿದೆಯೇ ,

ಇ) ಈ ಕ್ಷೇತ್ರವನ್ನು ಕೂಡಲ ಸಂಗಮ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರ ಅಭಿವೃದ್ಧಿ ಪ್ರಾಧಿಕಾರ ರಚಿಸುವುದೆ , ಹಾಗಿದ್ದಲ್ಲಿ, ಯಾವಾಗ ರಚಿಸಲಾಗುವುದು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕು, ಗಾಣಗಾಪುರದ ಶ್ರೀ ದತ್ತಾತ್ರೇಯಸ್ವಾಮಿ ದೇವಾಲಯವು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು, "ಎ" ವರ್ಗದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ

ಆ) ಈ ಕ್ಷೇತ್ರವು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು, ಈ ಕ್ಷೇತ್ರಕ್ಕೆ ಭೇಟಿ ನೀಡುವ ಭಕ್ತಾಧಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ವಿದ್ಯುತ್ ಸೌಲಭ್ಯ ಆಸ್ಪತ್ರೆ ಸೌಲಭ್ಯ ಮತ್ತು ಒಳಚರಂಡಿ ಸೌಲಭ್ಯ ಇನ್ನೀತರ ಅಗತ್ಯ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರವು ಆದೇಶ ಸಂಖ್ಯೆ ನಅಇ / 11 / ಗುಅಪ್ರ / 2000, ದಿ 12 4 2001ರಲ್ಲಿ ವಿಶೇಷ ಯೋಜನಾ ಪ್ರಾಧಿಕಾರವನ್ನು ಮುಂದಿನ ಆದೇಶದವರೆಗೆ ರಚಿಸುತ್ತದೆ

ಇ) ಸರ್ಕಾರವು ಮೇಲ್ಕಂಡ ಸಮಿತಿಯನ್ನು ರಚಿಸಿ ಗಾಣಗಾಪುರ ಕ್ಷೇತ್ರಕ್ಕೆ ಭೇಟಿ ನೀಡುವ ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ಷೇತ್ರದ ಯೋಜಿತ ಬೆಳವಣಿಗೆಗಾಗಿ ಯೋಜನೆಯನ್ನು ರೂಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಈ ಕಾರ್ಯಗಳನ್ನು ನಿರ್ವಹಿಸುವಾಗ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಗಾಣಗಾಪುರ

ಕ್ಷೇತ್ರದ ಯೋಜಿತ ಬೆಳವಣಿಗೆಗಾಗಿ ಯೋಜನೆಯನ್ನು ರೂಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಮಿತಿಗೆ ನಿರ್ದೇಶಿಸಲಾಗಿದೆ

708 (922) ಶ್ರೀ ರಘುಪತಿ ಭಟ್ ಕೆ (ಉಡುಪಿ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಮತ್ತು ಗ್ರಾಮೀಣ ಪ್ರದೇಶ ಎಂಬ ಭೇದವಿಲ್ಲದೆ ಎಲ್ಲಾ ಪ್ರದೇಶದ ನಾಗರಿಕರಿಗೆ ಸಮಾನವಾಗಿ ಸೀಮೆಎಣ್ಣೆ ಒದಗಿಸುವಲ್ಲಿ ಸರ್ಕಾರದ ನಿಲುವೇನು ,

ಆ) ಬಿ ಪಿ ಎಲ್ ಕಾರ್ಡುದಾರರಿಗೆ ನೀಡುವಂತೆ ಎ ಪಿ ಎಲ್ ಕಾರ್ಡುದಾರರಿಗೂ ಮಾಸಿಕ ಕನಿಷ್ಠ 5 ಲೀಟರ್ ಸೀಮೆಎಣ್ಣೆ ಒದಗಿಸಲು ಸರ್ಕಾರ ಸಿದ್ಧರಿರುವುದೇ ,

ಇ) ಈ ವಿಚಾರದಲ್ಲಿ ಜನರಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

ಈ) ಹಾಗಿದ್ದಲ್ಲಿ, ಸರ್ಕಾರ ಕ್ರಮ ಕೈಗೊಳ್ಳುವುದೇ ,

ಉ) ಎಷ್ಟು ಕಾಲಾವಧಿಯೊಳಗೆ ವಿತರಿಸಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯ ಸರ್ಕಾರವು ರಾಜ್ಯದಾದ್ಯಂತ ಏಕ ರೂಪ ಪ್ರಮಾಣದಲ್ಲಿ ಸೀಮೆಎಣ್ಣೆಯನ್ನು ಪಡಿತರ ಚೀಟಿದಾರರಿಗೆ ಕನಿಷ್ಠ ತಲಾ 5 ಲೀಟರ್‌ನಂತೆ ವಿತರಿಸಲು ಕ್ರಮ ಕೈಗೊಳ್ಳಲು, ಗ್ರಾಮೀಣ ಪ್ರದೇಶ, ಪಟ್ಟಣ ಪ್ರದೇಶ ಮತ್ತು ಪಡಿತರ ವ್ರದೇಶಗಳಲ್ಲಿನ ಪಡಿತರ ಚೀಟಿ ಪ್ರಮಾಣಗನುಗುಣವಾಗಿ ವಿತರಿಸಲು 54,604 ಕೆ ಎಲ್ ಸೀಮೆಎಣ್ಣೆ ಬೇಕಾಗುತ್ತದೆ ಮೀನುಗಾರಿಕೆಗೆ ನೀಡುವ 752 ಕೆ ಎಲ್ ಸೇರಿ 55,356 ಕೆ ಎಲ್ ಸೀಮೆಎಣ್ಣೆ ಬೇಕಾಗುತ್ತದೆ

ಕೇಂದ್ರ ಸರ್ಕಾರದಿಂದ ಈಗ ನೀಡುತ್ತಿರುವ 49,416 ಕೆ ಎಲ್ ಸೀಮೆಎಣ್ಣೆಯಲ್ಲಿ ಸಮಾನವಾಗಿ ಗ್ರಾಮಾಂತರ ವ್ರದೇಶದಲ್ಲಿ 77 56 ಲಕ್ಷ ಅನಿಲ ರಹಿತ ಪಡಿತರ ಚೀಟಿಗಳಿರುವುದರಿಂದ 4 ಲೀಟರ್‌ನಂತೆ ನೀಡಿ, ಪಟ್ಟಣ ವ್ರದೇಶಗಳಲ್ಲಿನ 8 76 ಲಕ್ಷ ಪಡಿತರ ಚೀಟಿದಾರರಿಗೆ 5 ಅಥವಾ 6

32/4